ಇಲಾಖೆಗೆ ಒಂದು ಸರ್ಕ್ಯುಲರನ್ನು ಇಸ್ಯೂ ಮಾಡಿ ಎಲ್ಲೆಲ್ಲಿ ನಕಾಶೆ ದಾರಿಗಳನ್ನು ಈ ರೀತಿ ಒತ್ತುವರಿ ಮಾಡಿದಾರೋ ಅವುಗಳನ್ನು ಮೊದಲು ಇದ್ದ ಹಾಗೆ ಮಾಡಿಸುವುದಾಗಿ ಈ ಮನೆಗೆ ಆಶ್ವಾಸನೆ ಕೊಡುತ್ತೀರಾ?

ಶ್ರೀ ಎನ್. ಹುಚ್ಚಮಾಸ್ತಿಗೌಡ —ಇತ್ತೀಚಿಗೆ ಗ್ರಾಮಾಂತರ ಪ್ರದೇಶಗಳಲ್ಲಿ ಸಾವಿರಾರು ಮೈಲಿ ರಸ್ತೆಗಳು ಆಗಿವೆ. ಕ್ಷಾಮಗಾಲ ಬಂದಾಗ ಅನೇಕ ರಸ್ತೆಗಳನ್ನು ಮಾಡಿದ್ದಾರೆ. ಹೀಗೆ ರಸ್ತೆಗಳನ್ನು ಮಾಡುವಾಗ ಜಮೀನನ್ನು ಅಕ್ವೈರ್ ಮಾಡಲಿಲ್ಲ, ಅಥವಾ ಜಮೀನ್ದಾರರ ಅಭಿಪ್ರಾಯವನ್ನು ತೆಗೆದುಕೊಂಡು ಮಾಡಲಿಲ್ಲ. ಏನೋ ರಸ್ತೆಗಳನ್ನು ಮಾಡಬೇಕಿತ್ತು, ಜನಗಳಿಗೆ ಕೆಲಸವನ್ನು ಒದಗಿಸಬೇಕಿತ್ತು, ಆ ರೀತಿ ಕೆಲಸವಾಗಿದೆ. ಇದನ್ನು ಕ್ರಮಪಡಿಸಬೇಕಾದುದು ಬಹಳ ಅಗತ್ಯ. ಅದಕ್ಕೋಸ್ಕರ ಈಗ ಒಂದೊಂದು ಜಿಲ್ಲೆಯ ಒಂದೊಂದು ತಾಲ್ಲೂಕಿನ ಗ್ರಾಮಾಂತರ ಪ್ರದೇಶಗಳ ರಸ್ತೆಗಳನ್ನು ಸರ್ವೆ ಮಾಡಿಸ ಬೇಕೆಂಬ ಯೋಚನೆಯನ್ನು ಮಾಡಿದ್ದೇವೆ. ಏಕೆಂದರೆ ಹೊಸದಾಗಿ ಆಗಿರತಕ್ಕ ನಾಲೆಗಳನ್ನು ಮತ್ತು ರಸ್ತೆ ಗಳನ್ನು ನಕಾಶೆಯಲ್ಲಿ ಸೇರಿಸಿ ಸರ್ಕಾರದ ಆಸ್ತಿ ಎಂದು ಮಾಡಬೇಕಾಗಿದೆ. ಸರ್ಕಾರದ ಆಸ್ತಿಯನ್ನು ರಕ್ಷಣೆ ಮಾಡಬೇಕಾದ ಪೂರ್ಣ ಜವಾಬ್ದಾರಿ ಸರ್ಕಾರದ್ದು. ಆದ್ದರಿಂದ ಈ ಬಗ್ಗೆ ಯಾವ ಅನುಮಾನವು ಇಲ್ಲದೆ ಹೇಳುತ್ತೇನೆ. ಪ್ರತಿಯೊಂದು ರಸ್ತೆ ಒತ್ತುವರಿ ಆಗಿದೆಯೇ ಇಲ್ಲವೇ ಎಂಬುದನ್ನು ನೋಡತಕ್ಕದ್ದು ಕಷ್ಟದ ಕೆಲಸ ಸರ್ವೆ ಇಲಾಖೆ ರೀಸರ್ವೇ ಮಾಡಿದಾಗ ಏನೇನಾಗಿದೆ ಎಂಬುದನ್ನು ತಿಳಿದುಕೊಳ್ಳುವುದು ಸರ್ಕಾರದ ಕರ್ತವ್ಯ. ಆದರೆ ಆಗಿಂದಾಗ್ಗೆ ಎಲ್ಲ ರಸ್ತೆಗಳನ್ನು ಅಳತೆ ಮಾಡಿ ನೋಡುತ್ತೇವೆಂದು ಹೇಳು ವುದು ಆಗದೇ ಇರತಕ್ಕ ಕೆಲಸ.

Harasement by Forest Officials in Malnad Area

394. SRI S. M. SHEERNALLY CHANDRASHEKAR (Hosanagar).—Will the Minister for Food and Forest be pleased to State.—

(*a*) whethe it is a fact that grave situation has arisen in Malanad area due to harassment by Forest Officials on the ryots who collect the fuel in the Forest ;

(*b*) if so. the action taken by the Government in this behalf ?

SRI K. H. PATIL (Minister for Food and Forst).—

(*a*) No ; In this connection attention is also invited to the statement made by the Minister for Food and Forest on 29th March 1977 on the floor of Legislative Assembly.

(*b*) Does not arise in view of the reply to question (1) above.

ಶ್ರೀ ಎಸ್. ಎಂ ಶೀರನಾಳಿ ಚಂದ್ರಶೇಖರ್ —ತಾವು ಶಾಸನ ಸಭೆಯ ಮುಂದೆ ನನ್ನ ಪ್ರಶ್ನೆಗೆ ಉತ್ತರಕೊಟ್ಟು, ಮತ್ತು ಇದರ ಬಗ್ಗೆ ಅಧಿಕಾರಿಗಳಿಗೆ ತಮ್ಮ ವರದಿ ಹೋದಮೇಲೂ ಕೂಡ ಕೆಳದರ್ಜೆಯ ನೌಕರರು ನಮ್ಮ ಪ್ರದೇಶದಲ್ಲಿ ಕಟ್ಟಿಗೆ ಸಂಗ್ರಹಣೆ ಮಾಡತಕ್ಕವರನ್ನು ಹಿಡಿದು ಕಿರುಕುಳ ಕೊಡುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ಬಂದಿದ್ದರೆ ಏನು ಕ್ರಮ ತೆಗೆದುಕೊಂಡಿದ್ದೀರಿ ?

† ಶ್ರೀ ಕೆ. ಎಚ್. ಪಾಟೀಲ್.—ನಾನು ಇಲ್ಲಿ ಹೇಳಿಕೆ ಕೊಟ್ಟನಂತರ, ಅಂದರೆ ೨೩-೪-೧೯೭೭ರಲ್ಲಿ ಚೀಫ್‌ಕನ್ಸರ್ವೇಟರ್ ಆಫ್ ಫಾರೆಸ್ಟ್ಸ್‌ಗೆ ನನ್ನ ಸ್ಟೇಟ್‌ಮೆಂಟಿನ ಜಿಸ್ಟ್ ಕೊಟ್ಟು ಏನೇನು ಕೆಲಸಗಳನ್ನು ಯಾವ ಯಾವ ಅಧಿಕಾರಿಗಳು ಮಾಡಬೇಕು, ಯಾವ ರೀತಿಯಾಗಿ ಜಂಗಲ್ ವುಡ್, ಅಥವಾ ಫ್ಯೂಯಲ್ ವುಡ್ ಅನ್ನು ರೈತರಿಗೆ ಅಥವಾ ಬಡವರಿಗೆ ಕೊಡಬೇಕು ಎನ್ನುವುದರ ಬಗ್ಗೆ ವಿವರವನ್ನು ಕೊಟ್ಟಿದ್ದೇವೆ. ಆ ಸರ್ಕ್ಯುಲರ್ ಪ್ರತಿಯು ನನ್ನಲ್ಲಿದೆ. ಅನಂತರ ಇದರ ಬಗ್ಗೆ ಅಧಿಕಾರಿಗಳು ಯಾವ ತರಹದ ಕಿರುಕುಳ ವನ್ನು ಬಡವರಿಗೆ ಕೊಟ್ಟಿರುವುದು ಅಂಥ ವರದಿಯಾಗಲೀ ನನ್ನ ಗಮನಕ್ಕೆ ಬಂದಿಲ್ಲ.

ಶ್ರೀ ಎಸ್. ಎಂ. ಶಿವನಾಳಿ ಚಂದ್ರಶೇಖರ್.— ಮಲೆನಾಡಿನ ಭಾಗದಲ್ಲಿ ಮಳೆಗಾಲದಲ್ಲಿ ಅಡಿಕೆ ಬೇಯಿಸುವುದಕ್ಕೆ ಕಟ್ಟಿಗೆಯನ್ನು ಸಂಗ್ರಹಣೆ ಮಾಡದೇ ಹೋದರೆ ಬಹಳ ಕಷ್ಟವಾಗುತ್ತದೆ. ತಮ್ಮಗಳ ಪರ್ಮಿಷನ್ ತೆಗೆದುಕೊಂಡು ಕಟ್ಟಿಗೆ ಸಂಗ್ರಹಣೆ ಮಾಡುವುದು ಎಂದರೆ ಅದು ಆಗದೆ ಇರುವ ಪ್ರಶ್ನೆ. ತಾವು ಇದರ ಬಗ್ಗೆ ಹೇಳಿಕೆ ಮಾಡಿದ ಮೇಲೆ ಕಟ್ಟಿಗೆ ಕೊಡುವುದಕ್ಕಾಗುವುದಿಲ್ಲ ಎಂದು ಅಧಿಕಾರಿಗಳು ಹೇಳುತ್ತಿದ್ದಾರೆ, ಇದನ್ನು ತಾವು ಹೇಗೆ ಸರಿಪಡಿಸುತ್ತೀರಿ ?

ಶ್ರೀ ಕೆ. ಎಚ್. ಪಾಟೀಲ್.—ನನ್ನ ಹೇಳಿಕೆಯಲ್ಲಿ ಯಾವ ಯಾವ ಅಂಶವನ್ನು ಉಳವಡಿಸಿದ್ದೇನೆಯೋ ಅದನ್ನು ಅನುಕರಣೆ ಮಾಡುವುದು ಅಧಿಕಾರಿಗಳ ಕರ್ತವ್ಯ. ಅದಕ್ಕೆ ಅವರು ಅಮಾನ್ಯ ಮಾಡಿದರೆ, ಸರ್ಕಾರದ ಹುಕುಂ ಅನ್ನು ಅಮಾನ್ಯ ಮಾಡಿದಂಥ ಅಪಾದನೆಗೆ ಗುರಿಯಾಗುತ್ತಾರೆ.

Promotion to Class IV Staff in Revenue Department

441. SRI B PUTTASWAMIAH (Ramanagaram) Will the Minister for Revenue be pleased to state.—

(*a*) whether any quota has been reserved in C and R Rules of Revenue Department for promotion of Class IV servants to the post or cadre of II Division Clerks in Revenue Department if they posses the Minimum qualification of VIII standard and who have put in a minimum service of 5 years or more.

(*b*) whether Government is aware that there are a number of such persons in Revenue Department who fulfil these qualifications for promotions to the posts of II Division Clerk.

(*c*) whether it has come to the notice of Government that the Deputy Commissioner, Bangalore District has accorded promotions to some individuals without having regard to the C and R Rules of the Department :

(*d*) whether Government is aware that some officials in Revenue Department are mentioned in clause (b) have also passed Departmental examination and have studied upto S. S. L. C.

(*e*) whether Government intend to promote such persons to the cadre of II Division Clerks ?

SRI N. HUTCHMASTI GOWDA (Minister for Revenue).–(*a*) As per the Cadre and Recruitment Rules of Revenue Department 10 per cent of the vacancies in the Cadre of II Division Clerks have been reserved for promotion of class IV staff, who have passed S.S.L.C. or equivalent examination and who have put in a minimum service of three years.

(*b*) There are a number of persons in the cadre of Class IV who have passed VIII Standard examination only. But they are not qualified for promotion to the cadre of II Division Clerks, as the qualification prescribed for promotion is a pass in S. S. L. C.